ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಕೆ.ಎಸ್. ಈಶ್ವರಪ್ಪ (ಜಲಸಂಪನ್ಮೂಲ ಸಚಿವರು): ಅಧ್ಯಕ್ಷರೆ, ದಿನಾಂಕ: 27–3–2006ರ 5ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 59 ಪ್ರಶ್ನೆಗಳ ಪೈಕಿ 53 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅನುಬಂಧ–1

ಅಧ್ಯಕ್ಷರು: ಮಂಡಿಸಲಾಯಿತು.

2. ಅಧ್ಯಕ್ಷರ ತೀರ್ಪು

ಅಧ್ಯಕ್ಷರು: ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ನಡವಳಿಕೆಗಳ ನಿಯಮ 92ರ ಮೇರೆಗೆ ಹಕ್ಕುಚ್ಯುತಿ ಪ್ರಶ್ನೆ ಸೂಚನೆಯನ್ನು ದಿನದ ಉಪವೇಶನ ಪ್ರಾರಂಭವಾಗುವುದಕ್ಕೆ ಮುಂಚೆ ಕಛೇರಿಯಲ್ಲಿ ನೀಡಬೇಕಾಗುತ್ತದೆ. ಆದರೆ ತಾವು ಸೂಚನೆ ನೀಡಿರುವುದು ಈಗ ಪ್ರಶ್ನೋತ್ತರ ವೇಳೆ ಸಂದರ್ಭದಲ್ಲಿ. ಅದಲ್ಲದೆ ಹಕ್ಕುಚ್ಯುತಿ ಪ್ರಸ್ತಾವ ಈ ಮನೆಯ ಸದಸ್ಯರ ವಿರುದ್ಧ ಇರುವುದರಿಂದ ಅವರಿಗೂ ಸೂಚನೆ ಪ್ರತಿಯೊಂದನ್ನು ಕಳುಹಿಸಿಕೊಡಬೇಕಾಗುತ್ತದೆ. ಆದ್ದರಿಂದ ಈ ವಿಷಯವನ್ನು ನಾಳೆ ಪ್ರಸ್ತಾಪಿಸಲು ಅವಕಾಶ ಕೊಡಲಾಗುವುದು.

3. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು.

ಅ) ಹುಬ್ಬಳ್ಳಿ ಧಾರವಾಡದಲ್ಲಿ ಹೈಕೋರ್ಟ್ ಪೀಠದ ಸಲುವಾಗಿ ನಿರಶನೆ.

ಶ್ರೀ ಧರಂ ಸಿಂಗ್ (ವಿರೋಧ ಪಕ್ಷದ ನಾಯಕರು): ಅಧ್ಯಕ್ಷರೆ, ಈಗಾಗಲೇ ಹುಬ್ಬಳ್ಳಿ ಧಾರವಾಡದಲ್ಲಿ ಹೈಕೋಟ್ ಪೀಠದ ಸಲುವಾಗಿ ಎಲ್ಲಾ ವಕೀಲರೂ ಕೂಡ ಬಹಿಷ್ಕಾರ ಮಾಡಿದ್ದಾರೆ. ಬಿ.ಜಿ. ಹಿರೇಮಠರೂ ಕೂಡ ನಿರಶನ ಪ್ರಾರಂಭ ಮಾಡಿದ್ದಾರೆ. ನಿನ್ನೆ ಜಗದೀಶ್ ಶೆಟ್ಟರ್ ಕೂಡ ಆ ಸ್ಥಳಕ್ಕೆ ಹೋಗಿ ಅವರನ್ನು ವಿಚಾರಿಸಿದ್ದಾರೆ. ಮಾನ್ಯ ಹೊರಟ್ಟಿಯವರೂ ಕೂಡ ಹೋಗಿದ್ದಾರೆ. 50 ವರ್ಷದ ನಂತರ ಕರ್ನಾಟಕ ರಾಜ್ಯದಲ್ಲಿ ಉತ್ತರ ಕರ್ನಾಟಕ ಭಾಗದಲ್ಲಿ ಹೈಕೋರ್ಟ್ ಪೀಠ ಆಗಬೇಕು. ಶ್ರೀ ಜಗದೀಶ್ ಶೆಟ್ಟರ್ ಕೂಡ ಆಗಿನ ಮುಖ್ಯಮಂತ್ರಿಗಳ ಜೊತೆ ವಾಜಪೇಯಿಯವರೊಡನೆ ಮಾತನಾಡಿ ಬಂದರು. ಎಲ್ಲರೂ ಮಾತನಾಡಿದರೂ ಈ ಸಮಸ್ಯೆ ಇತ್ಯರ್ಥ ಆಗಿರಲಿಲ್ಲ. 2004ರಲ್ಲಿ ನಾವೆಲ್ಲರೂ ವಿಚಾರ ವಿಮರ್ಶೆ ಮಾಡಿ ವಿರೋಧ ಪಕ್ಷದವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೈಕೋರ್ಟಿನ ಮುಖ್ಯ ನ್ಯಾಯಾಧೀಶರನ್ನು ಭೇಟಿ ಆಗಿದ್ದೇವು. ಅವರ ಮನವೊಲಿಸಲು ಪ್ರಯತ್ನ ಮಾಡಿದ್ದೇವೆ. ಪರ್ಟಿಕಿಲರಾಗಿ ಇಲ್ಲಿದ್ದ ಯಡಿಯೂರಪ್ಪನವರು ಹಾಗೂ ಜಗದೀಶ್ ಶೆಟ್ಟರ್‌ರವರು ಎಂದು ಬರುತ್ತದೆ ಹೈಕೋರ್ಟ್ ಉತ್ತರ ಕರ್ನಾಟಕಕ್ಕೆ ಎಂದು ಕೇಳುತ್ತಿದ್ದರು. ಆಗಿನ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾದ ಜೈನ್‌ರವರ ಮನವೊಲಿಸಿ ಕೊನೆಗೆ ಗುಲ್ಬರ್ಗ, ಧಾರವಾಡಗಳಲ್ಲಿ ಶಂಕುಸ್ಥಾಪನೆ ಮಾಡಿದೆವು. ರಾಜ್ಯಪಾಲರು ಬಂದರು, ಮುಖ್ಯ ನ್ಯಾಯಮೂರ್ತಿಗಳು ಬಂದರು, ಜಗದೀಶ್ ಶೆಟ್ಟರ್ ರವರೂ ಕೂಡ ಇದ್ದರು. ಆಗಿನ ಉಪ ಮುಖ್ಯಮಂತ್ರಿ ಶ್ರೀ ಪ್ರಕಾಶ್‌ರವರೂ ಕೂಡ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಅದೇ ರೀತಿ ಗುಲ್ಬರ್ಗದಲ್ಲೂ ಪ್ರಾರಂಭ ಆಯಿತು. ನಾನು

ಬಜೆಟ್ ಮೇಲೆ ಮಾತನಾಡುವ ಸಂದರ್ಭದಲ್ಲಿ ಹೇಳಿದೆ, ಹಿಂದಿನ ಸರ್ಕಾರದ 20 ತಿಂಗಳ ಸಾಧನೆ ಹೈಕೋರ್ಟ್ ಪೀಠದ್ದು ಏನಿದೆ, ಅದರ ಉಲ್ಲೇಖ ಕೂಡ ಮಾಡಿಲ್ಲ, ಅದಕ್ಕೆ ಹಣವನ್ನೂ ಕೂಡ ಇಟ್ಟಿಲ್ಲ. ಅದನ್ನು ಮುಂದುವರೆಸುತ್ತೀರೋ ಇಲ್ಲವೋ ಎಂದು ಕೇಳಿದ್ದೆ. ನಾವು ಬಹಳ ಸಂಘರ್ಷ ಮಾಡಿ ಹೋರಾಟ ಮಾಡಿದರಿಂದ ಹೈಕೋರ್ಟ್ ಪೀಠ ಈಗ ಒದಗಿ ಬಂದಿದೆ. ಬೇರೆ ಬೇರೆ ಬಾಬ್ತುಗಳಲ್ಲಿ ಹಣ ಇಟ್ಟಿದ್ದರ ಬಗ್ಗೆ ಪ್ರಸ್ತಾಪಿಸಿದ್ದೀರಿ. ಹೈಕೋರ್ಟ್ ಪೀಠಕ್ಕೆ ಮಾತ್ರ ಯಾಕೆ ಹಣ ಇಡಲಿಲ್ಲ? ನಾವು ಧಾರವಾಡ, ಹಾಗೂ ಗುಲ್ಬರ್ಗಗಳ ಹೈಕೋರ್ಟ್ ಪೀಠಕ್ಕೆ ಮೊದಲು ಹಣ ಒದಗಿಸಿದ್ದೆವು. ಇವತ್ತು ಇಲ್ಲ ಎನ್ನುವ ರೀತಿ ಪ್ರತಿಭಟನೆ ನಡೆದಿದೆ. ಆ ಕ್ಷೇತ್ರದ ಕಂದಾಯ ಸಚಿವರು ಅವರನ್ನು ಭೇಟಿ ಮಾಡಿ ಮಾತನಾಡಿರುವುದು ನನಗೆ ಸಂತೋಷವನ್ನುಂಟುಮಾಡಿದೆ. ಅದೇ ರೀತಿ ಹೊರಟ್ಟಿಯವರೂ ಮಾತನಾಡಿದ್ದಾರೆ. ಮಾತನಾಡುವಾಗ ಇದನ್ನು ಸಂಪುಟದಲ್ಲಿ ಚರ್ಚೆ ಮಾಡಿ ಅದಕ್ಕೆ ಹಣ ಒದಗಿಸಿಕೊಡುವ ರೀತಿ ಹೇಳಿದ್ದಾರೆ. ಇಲ್ಲಿ ಹೈಕೋರ್ಟ್ ಪೀಠ ಬರುವುದಕ್ಕೆ ನಾವು ಬಹಳ ಕೆಲಸ ಮಾಡಿದ್ದೇವೆ, ಮನಸ್ಸು ಕೊಟ್ಟಿದ್ದೇವೆ. ಮಾನ್ಯ ಕುಮಾರಸ್ವಾಮಿಗಳೂ ಕೂಡ ಮುಖ್ಯಮಂತ್ರಿಗಳಾದ ಮೇಲೆ ಹುಬ್ಬಳಿ ಧಾರವಾಡಕ್ಕೆ ಹೋಗಿದ್ದಾರೆ. 6 ದಿನಗಳ ಕಾಲ ಉತ್ತರ ಕರ್ನಾಟಕದ ಸಮಸ್ಯೆ ಬಗೆಹರಿಸಲು ಅಲ್ಲೇ ಇರುತ್ತೇನೆ ಎಂದು ಒಂದು ಶಪಥ ಕೂಡ ಹೇಳಿದ್ದಾರೆ. ಅದೇ ರೀತಿ ಇವತ್ತೇನಾಗಿದೆ ಡಾ: ನಂಜುಂಡಪ್ಪ ವರದಿ ಜಾರಿಗೆ ತರುವ ರೀತಿಯಲ್ಲಿ ನಮ್ಮಿಂದ 606 ಕಿ.ಮೀ. ದೂರವಿರುವ ಗುಲ್ಬರ್ಗ, 405 ಕಿ.ಮೀ. ದೂರವಿರುವ ಹುಬ್ಬಳಿ–ಧಾರವಾಡಗಳ್ಲಲಿ ಸಾಮಾನ್ಯ ಜನರಿಗೆ ನ್ಯಾಯ ಒದಗಿಸವ ರೀತಿಯಲ್ಲಿ ಅಲ್ಲಲ್ಲಿ ಪೀಠ ಮಾಡುವುದು ಬಹಳ ಅವಶ್ಯಕ. ಬಹಳ ಲೆಕ್ಕ ಹಾಕಿ ಕೆಲಸವನ್ನು ಮಾಡಿದ್ದೇವೆ. ಏಕೋ ಮಾನ್ಯ ಉಪ ಮುಖ್ಯಮಂತ್ರಿಗಳು ಅದಕ್ಕೆ ಗಮನವನ್ನು ಕೊಡುತ್ತಿಲ್ಲ. ಇದೇನು ಸಾವಾನ್ಯ ವಿಷಯವೆಂದು ತಿಳಿದಿದ್ದೀರೊ, ಏನು ರಾಜ್ಯದ ಜನತೆಗೆ ಬೇಡವೆಂದು ತಿಳಿದುಕೊಂಡಿದ್ದೀರೋ? ಏನು ಹೋದ ಸಲ ಈ ಸಮಸ್ಯೆಗಳ ಬಗ್ಗೆ ನಾವು ಆಸಕ್ತಿ ವಹಿಸಿ ಮಾಡಿದ್ದನ್ನು ನಿಲ್ಲಿಸಬೇಕೆಂದು ಮಾಡಿದ್ದೀರೋ? ಅದಕ್ಕಾಗಿ ಅವರುಗಳು ಇವತ್ತಿನ ದಿವಸ ನಿರಶನವನ್ನು ಮುಂದುವರಿಸಿಕೊಂಡು ಹೋಗಿದ್ದಾರೆ. ನೀವು ಬಹಳಷ್ಟು ಪ್ರಯತ್ನವನ್ನು ಮಾಡಿ ಅವರಿಗೆ ಹೇಳಿದ್ದೀರಿ. ಆದರೂ ಕೂಡ ಮಾನ್ಯ ಹಿರೇಮಠ್ ಅವರ ಪ್ರವೃತ್ತಿ ತಮಗೆ ಗೊತ್ತು. ನಾನೂ ಕೂಡ ಹೈಕೋರ್ಟ್ ಪೀಠ ಆಗುತ್ತದೆ ಎಂದಾಗ ಎಂದು ಆಗುತ್ತದೆ ಎಂಬ ಪ್ರಶ್ನೆ ಬಂದಾಗ ನಾನು, ಹೆಚ್.ಕೆ. ಪಾಟೀಲ್ ಮತ್ತು ತಾವೂ ಕೂಡ ಇದ್ದಿರಬಹುದು, ಹೋಗಿ ಅವರ ಮನ ಒಲಿಸತಕ್ಕ ಪ್ರಯತ್ನವನ್ನು ಮಾಡಿದ್ದೇವೆ. ಇವತ್ತು ವಕೀಲರು ಸದನ ನಡೆಯತಕ್ಕ ಕಾಲದಲ್ಲಿ ಆ ಭಾಗಕ್ಕೆ ಅನ್ಯಾಯವಾಗಿದೆ ಎನ್ನುವ ಮಾತನ್ನು ಹೇಳಿದ ಮೇಲೆ ಇವತ್ತು ಸದನದಲ್ಲಿ ಸಭಾಧ್ಯಕ್ಷರು, ಉಪ ಮುಖ್ಯಮಂತ್ರಿಗಳು, ಮುಖ್ಯಮಂತ್ರಿಗಳೂ ಕೂಡ ಇದ್ದಾರೆ, ಸ್ಪಷ್ಟವಾದ ಉತ್ತರ ಮತ್ತು ಎಷ್ಟು ಹಣವನ್ನು ತಾವು ಇಟ್ಟಿದ್ದೀರಿ ಎಂದು ಹೇಳಿದರೆ ಅಲ್ಲಿ ಇವತ್ತು ನಿರಶನ ಕೂಡ ಮುಕ್ತಾಯಗೊಳ್ಳುತ್ತದೆ. ಆ ಮಾತನ್ನು ತಾವು ಹೇಳಬೇಕೆಂದು ಕೇಳುತ್ತೇನೆ. ಹೇಳಬೇಕೆಂದು ಕೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಇಲ್ಲಿ ಏನಾಗಿದೆ ಎಂದರೆ ಅವರಿಗೆ ಭಯ ಬಂದಿರುವುದು ನಿಮ್ಮ ಆಯವ್ಯಯದಲ್ಲಿ ಹೇಳಿಲ್ಲ. ಇದು ಸ್ಪಷ್ಟ. ಆಯವ್ಯಯದಲ್ಲಿ ಹೇಳದೇ ಇರುವುದರಿಂದ, ಉತ್ತರ ಕರ್ನಾಟಕದ ಭಾಗದಲ್ಲಿ ಭಯಭೀತಿ ವಾತಾವರಣ ನಿರ್ಮಾಣವಾಗಿದೆ. ಆದ್ದರಿಂದ ಅಲ್ಲಿ ಸತ್ಯಾಗ್ರಹ ಆರಂಭವಾಗಿದೆ. ತಾವು ಇಲ್ಲಿ ದಯವಿಟ್ಟು ಸ್ಪಷ್ಟವಾದ ಒಂದು ಉತ್ತರವನ್ನು ಕೊಡುವುದಾದರೆ ಅಲ್ಲಿ ಸತ್ಯಾಗ್ರಹ ನಿಲ್ಲಬಹುದೆಂದು ನಾನು ಅಂದು ಕೊಂಡಿದ್ದೇನೆ. ಆದ್ದರಿಂದ ತಾವು ಸ್ಪಷ್ಟವಾದ ಉತ್ತರವನ್ನು ಕೊಡಬೇಕೆಂದು ಅಧ್ಯಕ್ಷರ ಮೂಲಕ ಕೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ನಾನು ಮತ್ತು ಮುಖ್ಯಮಂತ್ರಿಗಳು ಏನು ಈ ಹೊಸ ಸಮಿಶ್ರ ಸರ್ಕಾರ ರಚನೆಯಾದ ಮೇಲೆ ಕೊಟ್ಟಿರುವ ಮೊದಲನೇ ಆದ್ಯತೆ ಉತ್ತರ ಕರ್ನಾಟಕ ಸರ್ವಾಂಗೀಣ ಅಭಿವೃದ್ಧಿಗೆ ಏನು ಆ ಭಾಗ ನಿರ್ಲಕ್ಷ್ಯಕ್ಕೊಳಗಾಗಿದೆ, ಆ ಬಗ್ಗೆ ರಾಷ್ಟ್ರಪತಿಗಳಾದ ಎ.ಪಿ.ಜೆ. ಅಬ್ದುಲ್ ಕಲಾಂ ಅವರು ಕೊಟ್ಟಂಥ ಸಲಹೆ, ಡಾ: ನಂಜುಂಡಪ್ಪನವರು ಕೊಟ್ಟಿರುವ ವರದಿ ಇದಕ್ಕೆ ನಾವು ಬದ್ದರಾಗಿದ್ದೇವೆ. ಬಜೆಟ್‌ನಲ್ಲಿ ಅಂಕಿಅಂಶಗಳೊಂದಿಗೆ ನಾನು ಉತ್ತರ ಕೊಡುವಾಗ ವಿವರಗಳನ್ನು ಕೊಡುವವನಿದ್ದೇನೆ. ಇದು ಮೊದಲನೆಯದು. ಎರಡನೆಯದು, ನಮ್ಮ ವಿರೋಧ ಪಕ್ಷದ ನಾಯಕರು ಮತ್ತು ವಾಟಾಳ್ ನಾಗರಾಜ್‌ರವರು ತಿಳಿದುಕೊಂಡಿರುವ ಹಾಗೆ ಬಜೆಟ್‌ನಲ್ಲಿ ಇದಕ್ಕಾಗಿ ಹಣವನ್ನು ಅಲೋಕೇಷನ್ ಮಾಡಿಲ್ಲವೆಂದು ಭಾವಿಸುವ ಅಗತ್ಯವಿಲ್ಲ. ನಾನು ನಿಮಗೆ ಹೇಳುತ್ತಿದ್ದೇನೆ. ಆರ್ಥಿಕ ಇಲಾಖೆ, ಎಸ್ಟಾಬ್ಲಿಷ್‌ಮೆಂಟ್ ನ್ಯೂ ಸರ್ಕ್ಯೂಟ್ ಬೆಂಚ್ ಎಂಬ ನಾನ್ ಪ್ಲಾನ್ ಶೀಷಿಕೆಯಡಿಯಲ್ಲಿ 2005–06ನೇ ಸಾಲಿನಲ್ಲಿ 20 ಕೋಟಿ ರೂ. ಹಣವನ್ನು ಮೀಸಲಾಗಿಡಲಾಗಿತ್ತು. ಆದರೆ ಒಂದು ರೂಪಾಯಿ ಖರ್ಚಾಗಿರಲಿಲ್ಲ. 2006–07ನೇ ಅಂದಾಜಿನಲ್ಲಿ 20 ಕೋಟಿ ರೂಪಾಯಿಗಳನ್ನು ನಾವು ಮೀಸಲಿಟ್ಟಿದ್ದೇವೆ. ತೆಗೆದಿಟ್ಟಿದ್ದೇವೆ. ಈಗಲ್ಲ. ಮೊದಲೇ ಮೀಸಲಿಟ್ಟಿದ್ದೇವೆ. ಏಕೆಂದರೆ ಈ ಬಜೆಟ್‌ನಲ್ಲಿ ಅನೇಕ ವಿಷಯಗಳನ್ನು ತಿಳಿಸಿದ್ದೇವೆ. ನಾನು ಉತ್ತರ ಕೊಡುವ ಟೈಮ್‌ನಲ್ಲಿ ಇನ್ನೂ ಸಮಗ್ರವಾದ ವಿವರಗಳನ್ನು ಹೇಳಿದಾಗ ನೀವು ಆಶ್ಚರ್ಯಪಡುತ್ತೀರಿ. ಮೊದಲನೆಯದು, ಈ ಬಜೆಟ್‌ನಲ್ಲಿ ನಾವು 20 ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದೇವೆ. ಹುಬ್ಬಳ್ಳಿ, ಗುಲ್ಬರ್ಗಾ, ಅಥವಾ ಎರಡೂ ಕಡೆಗಳಲ್ಲಿ ಈ ಸರ್ಕ್ಯೂಟ್ ಬೆಂಚನ್ನು ಸ್ಥಾಪನೆ ಮಾಡಬೇಕೆಂದು ಕರ್ನಾಟಕ ಉಚ್ಚ ನ್ಯಾಯಾಲಯದ ವಿವೇಚನೆಗೆ ಬಿಟ್ಟಿರುವಂಥದ್ದು. ಈಗ ಎರಡೂ ಕಡೆ ಸರ್ಕ್ಯೂಟ್ ಬೆಂಚ್ ಸ್ಥಾಪನೆಗೆ ಕರ್ನಾಟಕ ಸರ್ಕಾರ ಬದ್ಧವಾಗಿದೆ. ನಾವು ಮೀಸಲಿಟ್ಟಿರುವ ಹಣ ಏನು ಇದೆ, ಅದಕ್ಕಿಂತ ಹೆಚ್ಚು ಹಣವನ್ನು ಕೊಡುವುದಕ್ಕೂ ನಾವು ಸಿದ್ಧ ಇದ್ದೇವೆ. ಅದರ ಬಗ್ಗೆ ಮುಖ್ಯಮಂತ್ರಿಗಳು ಮತ್ತು ನಾನು ಇಬ್ಬರೂ ಬದ್ದರಿದ್ದೇವೆ. ಈ ಸರ್ಕಾರ ಬದ್ದ ಇದೆ. ಮತ್ತೆ ಈ ಬಜೆಟ್ ಭಾಷಣದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆ ಬಗ್ಗೆ ಪ್ರಸ್ತಾಪ ಮಾಡಿಲ್ಲವೆನ್ನುವಂಥದ್ದು ಸರಿಯಲ್ಲ. ನಾನು ಆ ಭಾಗದಲ್ಲಿ ಸತ್ಯಾಗ್ರಹ ಮಾಡುತ್ತಿರುವ ವಕೀಲರಲ್ಲಿ ವಿನಂತಿಯನ್ನು ಮಾಡುತ್ತೇನೆ, ಬಜೆಟ್‌ನಲ್ಲಿ ಈಗಾಗಲೇ 20 ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿರುವುದರಿಂದ, ತಕ್ಷಣ ನಮ್ಮ ಹಿರಿಯ ವಕೀಲರುಗಳೇನು ತಪ್ಪು ಕಲ್ಪನೆ ಮಾಡಿಕೊಂಡು ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ, ಅದನ್ನು ವಾಪಸ್ ತೆಗೆದುಕೊಳ್ಳಬೇಕೆಂದು ವಿನಂತಿಯನ್ನು ಮಾಡುತ್ತೇನೆ. ಅಷ್ಟೇ ಅಲ್ಲ, ಇದಕ್ಕೆ ಎಲ್ಲಾ ಪೂರ್ತಿ ಅನುಮತಿ ಸಿಕ್ಕಿದ ತಕ್ಷಣ ಅದರ ಕಾರ್ಯ ಪ್ರಾರಂಭವಾಗುತ್ತದೆ. ಬಹಳ ವರ್ಷಗಳಿಂದ ನೆನೆಗುದಿಗೆ ಬಿದ್ದಿರುವಂಥ ಈ ಉತ್ತರ ಕರ್ನಾಟಕದ ಜನರ ಅಪೇಕ್ಷೆ ಏನು ಇದೆ, ಅದನ್ನು ಪೂರೈಸುವುದಕ್ಕೆ ಹೈಕೋರ್ಟ್ ಬೆಂಚ್ ಸ್ಥಾಪನೆಯಾಗುವುದಕ್ಕೆ ಕಟ್ಟಡವನ್ನು ಪೂರ್ಣ ಮಾಡುವುದಕ್ಕೆ ಅಗತ್ಯವಿರುವ ಹಣ 20 ಕೋಟಿ ರೂ. ಅಲ್ಲದೆ ಇನ್ನೂ ಹೆಚ್ಚು ಹಣವನ್ನು ಕೊಡುವುದಕ್ಕೆ ನಾವು ಬದ್ದರಿದ್ದೇವೆ. ಅದನ್ನು ಮಾಡುತ್ತೇವೆನ್ನುವ ಭರವಸೆಯನ್ನು ಈ ಮನೆಯಲ್ಲಿ ನಾನು ಕೊಡುತ್ತಿದ್ದೇನೆ. ಅವರು ಸತ್ಯಾಗ್ರಹವನ್ನು ವಾಪಸ್ ತೆಗೆದುಕೊಳ್ಳಬೇಕೆನ್ನುವ ವಿನಂತಿಯನ್ನು ಮಾಡುತ್ತೇನೆ. ಬಹುಶಃ ಇನ್ನೇನೂ ನೀವು ಎದ್ದುನಿಂತುಕೊಂಡು ಪ್ರಶ್ನೆಯನ್ನೇ ಕೇಳುವ ಹಾಗಿಲ್ಲ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ತಮ್ಮ ಉತ್ತರದಲ್ಲಿ ನೂರು ಕೋಟಿ ರೂಪಾಯಿಗಳನ್ನು ಒದಗಿಸುತ್ತೇವೆಂದು ಹೇಳಬೇಕು. ಸುಮ್ಮನೆ ಆ 20 ಕೋಟಿ ರೂಪಾಯಿಗಳನ್ನು ಒದಗಿಸಿದರೆ ಏನು ಕೆಲಸ ಆಗುತ್ತೆ ? ಹಿಂದೆ ಏನು ಹಣ ಇತ್ತು, ಅದರಿಂದ ಏನೂ ಆಗಿರಲಿಲ್ಲ. ನೀವು ಕನಿಷ್ಟ ಮೂರು ಕೋಟಿ ರೂಪಾಯಿಗಳನ್ನು ಒದಗಿಸುತ್ತೇವೆಂದು ನಿಮ್ಮ ಉತ್ತರದಲ್ಲಿ ಹೇಳಬೇಕಾಗುತ್ತದೆ. ಇಲ್ಲದಿದ್ದರೆ ಅದು ಆಗುವುದಿಲ್ಲ. ಬಜೆಟ್‌ನಲ್ಲಿ ಏನೂ ಹೇಳಿಲ್ಲ. ಸುಮ್ಮನೆ ಏನಾದರೂ ಹೇಳಿದರೆ ಅದು ಉತ್ತರವಾಗುವುದಿಲ್ಲ. 100 ಕೋಟಿ ಇಡುತ್ತೇವೆ ಎಂದು ಅನೌನ್ಸ್ ಮಾಡಿ.

ಅಧ್ಯಕ್ಷರು: ಅವರು ಹೇಳಿದ್ದಾರೆ. ಇಟ್ಟಿದ್ದೇವೆ ಎಂದು.

ಆ) ಭದ್ರಾ ಡ್ಯಾಮ್‌ನಿಂದ ತುಂಗಭದ್ರಾ ಡ್ಯಾಮಿಗೆ ನೀರಾವರಿ ಹಾಗೂ ಕುಡಿಯುವ ನೀರಿನ ಸಲುವಾಗಿ 5 ಟಿ.ಎಂ.ಸಿ. ನೀರು ಬಿಡುವ ಬಗ್ಗೆ.

ಶ್ರೀ ಡಿ.ಆರ್. ಪಾಟೀಲ್(ಗದಗ): ಮಾನ್ಯ ಅಧ್ಯಕ್ಷರೆ, ತುಂಗಾಭದ್ರಾ ನದಿಯ ಕೆಳಗಡೆ ಇರುವ ಜನರಿಗೆ ನೀರಾವರಿ ಸಲುವಾಗಿ ತಾವು ಭದ್ರಾ ರಿಸರ್ವಾರ್‌ನಿಂದ ನೀರನ್ನು ಬಿಡುತ್ತಿದ್ದೀರಿ. ಸಂತೋಷ. ಬಿಡುವುದಕ್ಕೆ ನಮ್ಮ ವಿರೋಧವೇನೂ ಇಲ್ಲ. ಆದರೆ ಅದು ಎರಡೂವರೆಯಿಂದ ಮೂರು ಸಾವಿರ ಕ್ಯೂಸೆಕ್ಸ್‌ಗಿಂತ ಜಾಸ್ತಿಯಾದರೆ ನಾವೆಲ್ಲಾ ದಾರಿ ಉದ್ದಕ್ಕೂ ಕುಡಿಯುವ ನೀರಿನ ಸಲುವಾಗಿ ಏನು ಸ್ಕಾಂಡ್ ಬ್ಯಾರೇಜಸ್‌ಗಳನ್ನು ಮಾಡಿದ್ದೇವೆ, ಅವೆಲ್ಲಾ ಕೊಚ್ಚಿಕೊಂಡು ಹೋಗುತ್ತವೆ. ಕುಡಿಯುವ ನೀರಿಗೆ ಬಹಳ ತಾಪತ್ರಯವಾಗುತ್ತದೆ. ಅದಕ್ಕೆ ದಯವಿಟ್ಟು ಮೂರು ಸಾವಿರ ಕ್ಯೂಸೆಕ್ಸ್‌ಗಿಂತ ಜಾಸ್ತಿ ನೀರು ಬಿಡಲಾರದ ಹಾಗೆ ತಾವು ರೆಗ್ಯುಲೇಟ್ ಮಾಡಿ ಅವರಿಗೆ ಬೇಕಾಗುವಂಥ ಐದು ಟಿಎಂಸಿ ನೀರನ್ನು ಬಿಡುವುದಕ್ಕೆ ತಾವು ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎನ್.ಎಸ್. ಬೋಸರಾಜು (ಮಾನ್ವಿ): ಮಾನ್ಯ ಅಧ್ಯಕ್ಷರೆ, ತುಂಗಭದ್ರಾ ಅಚ್ಚುಕಟ್ಟಿನಲಿ ರೈತರಿಗೆ ಅಗಿರತಕ್ಕ ತೊಂದರೆಯಿಂದ ಸನ್ಮಾನ್ಯ ಸಚಿವರು ಆ ಭಾಗಕ್ಕೆ ಬಂದ ಸಂದರ್ಭದಲ್ಲಿ ಎಲ್ಲಾ ಪಕ್ಷದ ಮುಖಂಡರು ಹಾಗೂ ಯುವಜನ ಸಂಘ ಸಂಸ್ಥೆಗಳ ಒಂದು ಕೋರಿಕೆಯ ಮೇರೆಗೆ ಇವತ್ತು ಸರ್ಕಾರ 5 ಟಿಎಂಸಿ ನೀರನ್ನು ಭದ್ರಾದಿಂದ ತುಂಗಾಭದ್ರಾಗೆ ಬಿಟ್ಟು ಬಳ್ಳಾರಿ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯಲ್ಲಿರತಕ್ಕ 4 ಲಕ್ಷ ಎಕರೆಯಲ್ಲಿ ನಿಂತಿರುವ ಬೆಳೆಗೆ ನೀರನ್ನು ಕೊಡಬೇಕೆಂದು ಹೇಳಿ ಅಲ್ಲಿ ನೀರನ್ನು ಬಿಡುತ್ತಿದ್ದಾರೆ. ಅಲ್ಲಿ 5 ಟಿಎಂಸಿ ನೀರನ್ನು ಕೊಡಬೇಕೆಂದು ಹೇಳಿ ಈಗಾಗಲೇ ಆದೇಶ ಹೊರಡಿಸಿದ್ದಾರೆ. ಆದುದರಿಂದ ಕನಿಷ್ಟ 5 ಸಾವಿರ ಕ್ಯೂಸೆಕ್ಸ್ ಡಿಸ್‌ಚಾರ್ಜ್ ಮಾಡದಿದ್ದರೆ ಬಹಳ ತೊಂದರೆಯಾಗುತ್ತದೆ. ಹಿಂದೆ ನಮಗೆ ಆಗಿರುವ ಅನುಭವ, ಏಳು ಬಾರಿಗೆ ನಾವು ನೀರನ್ನು ಬಿಡಿಸಿದ್ದೇವೆ. ಆ ನೀರು ಇಲ್ಲಿ ಸೇರಲಿಕ್ಕೆ ಅವಕಾಶ ಇರುವುದಿಲ್ಲ. ಸಾಕಷ್ಟು ನೀರು ನಿಮಗೆ ಪೋಲು ಆಗುತ್ತದೆ. ಏಕೆಂದರೆ ಭದ್ರಾದಿಂದ ತುಂಗಾಭದ್ರಾಗೆ ಬರುವುದರೊಳಗೆ ಸಾವಿರಾರು ಪಂಪ್‌ಸೆಟ್ಟುಗಳು ಇವೆ ಹಾಗಾಗಿ ಐದು ಸಾವಿರ ಕ್ಯೂಸೆಕ್ಸ್ ಮಿನಿಮಮ್ ಅಲ್ಲಿ ಬಿಟ್ಟಿರೆ ನಮಗೆ ಮೂರೂವರೆ ಟಿಎಂಸಿ ಮಾತ್ರ ರಿಕವರಿಯಾಗಲಿಕ್ಕೆ ಸಾಧ್ಯತೆ ಇದೆ. ಆದಾದನಂತರ ಪ್ರವಾಹವನ್ನು ಕಡಿಮೆ ಮಾಡಿ ಕೊನೆಗೆ ಅಲ್ಲಿ ನೀವು ಕುಡಿಯುವ ನೀರಿಗೆ ಏನು ಸ್ಕಾಂಡ್ ಬ್ಯಾಗ್ಸ್ ಹಾಕತಕ್ಕದ್ದು, ಇತ್ಯಾದಿ ಮಾಡಲಿಕ್ಕೆ ಸಾಕಷ್ಟು ಅವಕಾಶ ಇದೆ. ಹಾಗಾಗಿ ಯಾವುದೇ ಕಾರಣಕ್ಕೂ ಎರಡು ಸಾವಿರ, ಎರಡೂವರೆ ಸಾವಿರ ಬಿಟ್ಟರೆ ಅಲ್ಲೇನು ಯಾವ ಉದ್ದೇಶಕ್ಕಾಗಿ ಅವರು ನೀರನ್ನು ಬಿಟ್ಟಿದ್ದರೋ ಅದು ನೆರವೇರುವುದಿಲ್ಲ ಹಾಗೂ